<u>ದಿನಾಂಕಃ 24-04-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಮುಂದುವರಿದ ಪಾಟೀ ಸವಾಲುಃ- 3 ನೇ ಪ್ರತಿವಾದಿ ಪರಃ ಶ್ರೀ ಹೆಚ್.ಬಿ.ವಿ.ಕೆ. ವಕೀಲರಿಂದಃ-</u>

ನನ್ನ ಅಜ್ಜ ದ್ಯಾವಪ್ಪಗೌಡ ಇವರಿಗೆ ಒಟ್ಟು ಕುಟುಂಬದ ಆಸ್ತಿಯಲ್ಲಿ ಬರುತ್ತಿದ್ದ ವರಮಾನ ಅಲ್ಲದೇ ಬೇರೆ ಮೂಲದಿಂದಲೂ ಸಹ ವರಮಾನ ಇತ್ತು ಎಂದರೆ ಸರಿಯಲ್ಲ. ನನ್ನ ಅಜ್ಜ ದ್ಯಾವಪ್ಪಗೌಡ ಇವರು ಭತ್ತದ ವ್ಯಾಪಾರ ಮಾಡುತ್ತಿದ್ದರು ಮತ್ತು ಟಿಲ್ಲರ್ ಬಾಡಿಗೆ ಕೊಡುತ್ತಿದ್ದರು ಆ ಮೂಲಗಳಿಂದ ವರಮಾನ ಇದ್ದರೂ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಅಜ್ಜ 2020 ರಲ್ಲಿ ತೀರಿಕೊಂಡಿರುತ್ತಾರೆ. ನನ್ನ ಅಜ್ಜ ತೀರಿಕೊಳ್ಳುವ ಮೊದಲು 2019 ರಲ್ಲಿ ಮೌಖಿಕ ಹಿಸ್ಸೆ ಮಾಡಿದ್ದರು ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎನ್ನುತ್ತಾರೆ. ನಾನು ಹೊಳೆನರಸೀಪುರದಲ್ಲಿ ವಾಸವಿದ್ದೇನೆ. ದಾವಾ ಐಟಂ ನಂ.6 ರ ಆಸ್ತಿಯನ್ನ 1 ನೇ ಪ್ರತಿವಾದಿಗೆ 2019 ರಲ್ಲಿಯೇ ನನ್ನ ಅಜ್ಜ ದೇವಪ್ಪಗೌಡ ಬಿಟ್ಟುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. 2019 ರಿಂದ ನನ್ನ ತಾಯಿ ದಾವಾ ಅನುಸೂಚಿ ಐಟಂ ನಂ.6 ರ ಉತ್ಪತ್ತಿಯನ್ನ ಪಡೆಯುತ್ತಿದ್ದಾರೆ ಎಂದರೆ ಧರ್ಮರಾಜ್ ಅದರ ಉತ್ಪತ್ತಿ ಪಡೆಯುತ್ತಿದ್ದಾನೆ ಎನ್ನುತ್ತಾರೆ. ದಾವಾ ಐಟಂ ನಂ.6 ರ ಆಸ್ತಿಯನ್ನ 1 ನೇ ಪ್ರತಿವಾದಿಯೇ ಉಳುಮೆ ಮಾಡಿ ಅದರ ಉತ್ಪನ್ನವನ್ನ ತೆಗೆದುಕೊಳ್ಳುತ್ತಿದ್ದರೂ ಮತ್ತು ಆ ವಿಚಾರದ ಬಗ್ಗೆ ನನಗೆ ಮಾಹಿತಿ ಇದ್ದರೂ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಅಜ್ಜ ತೀರಿಕೊಂಡ ನಂತರ ದಾವಾ ಅನುಸೂಚಿ ಐಟಂ ನಂ.6

ರ ಖಾತೆ 1 ನೇ ಪ್ರತಿವಾದಿ ಹೆಸರಿಗೆ ಆಗಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಾವಾ ಸ್ವತ್ತುಗಳ ಸರ್ವೆ ನಂಬರ್, ಅವುಗಳ ವಿಸ್ತೀರ್ಣ ಹಾಗೂ ಅವುಗಳು ಎಲ್ಲೆಲ್ಲಿವೆ ಎಂದು ಹೇಳಲು ನನಗೆ ನೆನಪಿಲ್ಲ. ನನ್ನ ಅಜ್ಜ ಪೌತಿಯಾದ ನಂತರ ನನ್ನ ತಾಯಿ ಹೆಸರಿಗೆ ದಾವಾ ಅನುಸೂಚಿ ಐಟಂ ನಂ.6 ರ ಆಸ್ತಿ ಸಂಬಂಧ ಎಂ.ಆರ್.ನಂ.70/2021-22 ರಂತೆ ಖಾತೆಯಾಗಿದೆ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎನ್ನುತ್ತಾರೆ. ನನ್ನ ಅಜ್ಜ ತೀರಿಕೊಂಡ ನಂತರ ದಾವಾ ಅನುಸೂಚಿ ಐಟಂ ನಂ.6 ರ ಆಸ್ತಿ ಸಂಪೂರ್ಣ ಮಾಲೀಕತ್ವ 1 ನೇ ಪ್ರತಿವಾದಿಗೆ ಇದೆ ಎಂದರೆ ಸಾಕ್ಷಿ ಅವರಿಗೆ ಇರಬಹುದು ಆದರೆ ಧರ್ಮರಾಜ್ ಸದರಿ ಆಸ್ತಿಯನ್ನ ಉಳುಮೆ ಮಾಡುತ್ತಿದ್ದಾರೆ ಎನ್ನುತ್ತಾರೆ. ದಾವಾ ಅನುಸೂಚಿ ಐಟಂ ನಂ.6 ರ ಬಾಬ್ತು ನನ್ನ ಅಜ್ಜ ತೀರಿಕೊಂಡ ನಂತರ 1 ನೇ ಪ್ರತಿವಾದಿ ಹೆಸರಿಗೆ ಖಾತೆಯಾಗಿರುವ ವಿಚಾರ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನ್ಯಾಯಾಲಯಕ್ಕೆ ಹಾಕಿದ ನಂತರ ಆ ವಿಚಾರ ತಿಳಿಯಿತು ಎನ್ನುತ್ತಾರೆ. ನನ್ನ ಅಜ್ಜನ ಹೆಸರಿನಿಂದ 1 ನೇ ಪ್ರತಿವಾದಿ ಹೆಸರಿಗೆ ದಾವಾ ಅನುಸೂಚಿ ಐಟಂ ನಂ.6 ರ ಖಾತೆ ವರ್ಗಾವಣೆಯಾಗಿದ್ದನ್ನ ನಾನು ಕಂದಾಯ ಇಲಾಖೆ ಮುಂದೆ ಪ್ರಶ್ನೆ ಮಾಡಿದ್ದೇನೆ. ಮಾನ್ಯ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಆರ್.ಎ.ನಂ.259/2022 ರ ಮೇಲ್ಮನವಿಯಲ್ಲಿ ದಿಃ16.02.2024 ರಂದು ಆದೇಶವಾಗಿದೆ ಎಂದರೆ ಸರಿ. 1 ನೇ ಪ್ರತಿವಾದಿ ಹೆಸರಿಗೆ ಖಾತೆಯಾಗಿರುವುದನ್ನ ಮಾನ್ಯ ಉಪವಿಭಾಗಧಿಕಾರಿಗಳ ನ್ಯಾಯಾಲಯದಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ದ್ಯಾವಪ್ಪಗೌಡ ಮರಣ ಹೊಂದಿದ ನಂತರ ಅವರ ಕ್ರಿಯಾಧಿಯನ್ನ 3 ನೇ ಪ್ರತಿವಾದಿ ನೆರವೇರಿಸಿರುತ್ತಾರೆ

ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನನ್ನ ಅಣ್ಣ ಜಯದೇವೇಗೌಡ ಮಾಡಿರುತ್ತಾರೆ ಎನ್ನುತ್ತಾರೆ. ನನ್ನ ಅಜ್ಜನ ಉತ್ತರ ಕ್ರಿಯಾಧಿಯನ್ನ 3 ನೇ ಪ್ರತಿವಾದಿ ಮಾಡಿದ್ದರೂ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ 3 ನೇ ಪ್ರತಿವಾದಿ ಮನೆಯಲ್ಲಿ ವಾಸವಿದ್ದು ಆಕೆಯ ಜೀವನ ನಿರ್ವಹಣೆಯನ್ನ ಸದರಿಯವರೇ ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನನ್ನ ಅಣ್ಣ ನನ್ನ ತಾಯಿಯನ್ನ ನೋಡಿಕೊಳ್ಳುತ್ತಿದ್ದಾರೆ ಎನ್ನುತ್ತಾರೆ. ನನ್ನ ತಾಯಿಯ ಜೀವನ ನಿರ್ವಹಣೆಯನ್ನ 3 ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದರೂ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಾಯಿಯನ್ನ 3 ನೇ ಪ್ರತಿವಾದಿ ನೋಡಿಕೊಳ್ಳುತ್ತಿರುವುದರಿಂದ ಸದರಿಯವರು ದಿಃ14.01.2022 ರಂದು ನನ್ನ ತಾಯಿ ಅವರ ಪರವಾಗಿ ದಾನಪತ್ರ ಮಾಡಿರುತ್ತಾರೆ ಎಂದರೆ ಸಾಕ್ಷಿ ಆಕೆಯನ್ನ ಕರೆದುಕೊಂಡು ಹೋಗಿ ದಾನಪತ್ರವನ್ನ ಸೃಷ್ಟಿ ಮಾಡಿರುತ್ತಾರೆ ಎನ್ನುತ್ತಾರೆ. ದಾನಪತ್ರದ ಆಧಾರದ ಮೇಲೆ ದಾವಾ ಅನುಸೂಚಿ ಐಟಂ ನಂ.6 ರ ಆಸ್ತಿಯ ಖಾತೆ 3 ನೇ ಪ್ರತಿವಾದಿ ಹೆಸರಿಗೆ ಆಗಿದೆ ಎಂದರೆ ಸಾಕ್ಷಿ ಆ ರೀತಿ ಮಾಡಿಕೊಂಡಿರುತ್ತಾರೆ ಎನ್ನುತ್ತಾರೆ. 3 ನೇ ಪ್ರತಿವಾದಿ ಹೆಸರಿಗೆ ದಾವಾ ಅನುಸೂಚಿ ಐಟಂ ನಂ.6 ರ ಖಾತೆಯಾಗಿದ್ದನ್ನ ಪ್ರಶ್ನೆ ಮಾಡಿ ನಾನು ಕಂದಾಯ ಇಲಾಖೆ ಮುಂದೆ ತಕರಾರು ಸಲ್ಲಿಸಿಲ್ಲ. ಸಾಕ್ಷಿ ಮುಂದುವರಿದು ಈ ದಾವೆ ಹೂಡಿದ ನಂತರ ಆ ವಿಚಾರ ನಮಗೆ ತಿಳಿಯಿತು ಎನ್ನುತ್ತಾರೆ. ದಾವೆ ಹೂಡುವವರೆಗೆ ದಾವಾ ಸ್ವತ್ತುಗಳ ಸಂಬಂಧ ನನಗೆ ಮಾಹಿತಿ ಇರಲಿಲ್ಲ. ದಾವಾ ಅನುಸೂಚಿ ಐಟಂ ನಂ.6 ರ ಸಂಬಂಧ ನನಗೆ ಹಿಸ್ಸೆ ಕೇಳಲು

ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಐಟಂ ನಂ.7 ರ ಆಸ್ತಿಯನ್ನ ನನ್ನ ಅಜ್ಜ ದಿಃ14.05.1958 ರಂದು ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಾವಾ ಅನುಸೂಚಿ ಐಟಂ ನಂ.7 ರ ಆಸ್ತಿಯನ್ನ ನನ್ನ ಅಜ್ಜ ತನ್ನ ಸ್ವಂತ ದುಡಿಮೆಯಿಂದ ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ನೀವು ಯಾವಾಗ ಜನಿಸಿರುತ್ತೀರಾ ಎಂದರೆ ಸಾಕ್ಷಿ ದಿನಾಂಕ ನೆನಪಿಲ್ಲ ಆದರೆ ಆಲಿ ನನಗೆ 60 ವರ್ಷ ವಯಸ್ಸು ಎನ್ನುತ್ತಾರೆ. ದಾವಾ ಅನುಸೂಚಿ ಐಟಂ ನಂ.7 ನ್ನ ಖರೀದಿ ಮಾಡಿದಾಗ ನಾನು ಹುಟ್ಟಿಲ್ಲದೇ ಇದ್ದುದರಿಂದ ಇದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಆದರೆ ಆ ವಿಚಾರ ಧರ್ಮನಿಗೆ ಗೊತ್ತು ಎನ್ನುತ್ತಾರೆ. ದಾವಾ ಅನುಸೂಚಿ ಐಟಂ ನಂ.8 ರ ಆಸ್ತಿ ಸಂಬಂಧ ದ್ಯಾವಪ್ಪಗೌಡರ ಸ್ವಯಾರ್ಜಿತ ಆಸ್ತಿ ಎಂದರೆ ಸಾಕ್ಷಿ ಅದನ್ನ ನನ್ನ ಅಜ್ಜ ಕೊಂಡುಕೊಂಡಿರುತ್ತಾರೆ ಎನ್ನುತ್ತಾರೆ. ದಾವಾ ಅನುಸೂಚಿ ಐಟಂ ನಂ.8 ರ ಆಸ್ತಿಯನ್ನ  ನನ್ನ ಅಜ್ಜ ದರ್ಕಾಸ್ತಿನಲ್ಲಿ ಹಿಡಿದಿರುತ್ತಾರೆ ಎಂದರೆ ಸಾಕ್ಷಿ ಅವರೇ ಸ್ವಂತ ಮಾಡಿರುತ್ತಾರೆ ಎನ್ನುತ್ತಾರೆ.  ದಾವಾ ಅನುಸೂಚಿ ಐಟಂ ನಂ.7 ಮತ್ತು 8 ರ ಆಸ್ತಿಗಳು ನನ್ನ ಅಜ್ಜನ ಸ್ವಯಾರ್ಜಿತ ಆಸ್ತಿಗಳು ಆದ್ದರಿಂದ ಈ ಸಂಬಂಧ ದಿಃ14.08.2020 ರಂದು ನನ್ನ ಅಜ್ಜ 3 ನೇ ಪ್ರತಿವಾದಿ ಪರವಾಗಿ ದಾನಪತ್ರ ಬರೆದಿರುತ್ತಾರೆ ಎಂದರೆ  ಸಾಕ್ಷಿ ನನ್ನ ಅಜ್ಜನಿಗೆ ವಯಸ್ಸಾಗಿತ್ತು ಅವರನ್ನ 3 ನೇ ಪ್ರತಿವಾದಿ ಕರೆದುಕೊಂಡು ಹೋಗಿ ಆ ರೀತಿ ದಸ್ತಾವೇಜು ಬರೆಸಿಕೊಂಡಿರುತ್ತಾರೆ ಎನ್ನುತ್ತಾರೆ. ಸದರಿ ದಾನಪತ್ರದ ಆಧಾರದ ಮೇಲೆ 3 ನೇ ಪ್ರತಿವಾದಿ ಹೆಸರಿಗೆ ಖಾತೆ ಸಹ ವರ್ಗಾವಣೆಯಾಗಿದೆ ಎಂದರೆ ಸಾಕ್ಷಿ ಅವರು ದಸ್ತಾವೇಜು ಮಾಡಿಕೊಂಡಿದ್ದರಿಂದ ಖಾತೆ ವರ್ಗಾವಣೆಯಾಗಿದೆ ಎನ್ನುತ್ತಾರೆ.

3 ನೇ ಪ್ರತಿವಾದಿ ಹೆಸರಿಗೆ ಖಾತೆ ವರ್ಗಾವಣೆಯಾಗಿರುವ ಬಾಬ್ತು ನಾನು ಕಂದಾಯ ಅಧಿಕಾರಿಗಳ ಮುಂದೆ ಯಾವುದೇ ತಕರಾರು ಹಾಕಿಲ್ಲ. ಈ ಸಂಬಂಧ ತಕರಾರು ಸಲ್ಲಿಸಲು ನನಗೇನೂ ತೊಂದರೆ ಇರಲಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ನಾನು ನ್ಯಾಯಾಲಯಕ್ಕೆ ದಾವೆ ಹೂಡಿದ್ದೇನೆ ಎನ್ನುತ್ತಾರೆ. ನ್ಯಾಯಾಲಯದ ಮುಂದೆ ದಾವೆ ಹೂಡಿದ ನಂತರವೂ ಸಹ 3 ನೇ ಪ್ರತಿವಾದಿ ಹೆಸರಿಗೆ ಆಗಿರುವ ಖಾತೆಯನ್ನ ಪ್ರಶ್ನೆ ಮಾಡಬಹುದಿತ್ತು ಎಂದರೆ ಸರಿ. ದಾವಾ ಅನುಸೂಚಿ ಐಟಂ ನಂ.7 ಮತ್ತು 8 ರ ಆಸ್ತಿ ಸಂಬಂಧ ನನ್ನ ಅಜ್ಜ ದಾನಪತ್ರ ಬರೆದಿರುವುದರಿಂದ ಸದರಿ ಆಸ್ತಿಗಳಲ್ಲಿ ಹಿಸ್ಸೆ ಕೇಳಲು ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಐಟಂ ನಂ.6 ರ ಆಸ್ತಿ ಸಹ 3 ನೇ ಪ್ರತಿವಾದಿಗೆ ದಾನಪತ್ರದ ಮುಖಾಂತರ ಬಂದಿರುವುದರಿಂದ ಅದರಲ್ಲಿ ಹಿಸ್ಸೆ ಕೇಳಲು ನನಗೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ಸವಾಲುಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಓಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್‌ಆರ್ಃ